ಗುರುಪ್ರಸಾದ್ ಕಂಟಲಗೆರೆ

ಕಲೆ: ಬಸವರಾಜಾಚಾರ್ ಕೆ.ಆರ್.

# ಶ್ರೀಮಠದ ಹೂದೋಟ

ಶ್ರೀಮದ್ ಮಠದ ಕಿರಿಯ ಶ್ರೀಗಳು ಎಂದಿನಂತೆ ಪೀಠದ ಮೇಲೆ ಆಸೀನರಾಗಿದ್ದರಾದರೂ... ದೈನಂದಿನ ಪ್ರಸನ್ನತೆ ಇಂದು ಕಾಣದಾಗಿತ್ತು. ಅವರ ಹಣೆಯಲ್ಲಿ ಕಂಗೊಳಿಸುತ್ತಿದ್ದ ಮೂರು ಪಟ್ಟೆಯ ವಿಭೂತಿ ಒಂಚೂರೂ ಡಲ್ಲಾಗದಿರುವುದು ಅದು ಇದೀಗಷ್ಟೆ ಹಣೆಯನ್ನೇರಿದೆ ಎಂದು ಊಹಿಸಬಹುದಾಗಿತ್ತು.

ಸ್ವಾಮಿಗಳು ತಮ್ಮ ನಿತ್ಯಕಾಯಕದಂತೆ ಮುಂಜಾನೆ ನಾಲ್ಕುವರೆಗೆ ಎದ್ದು ಒಂದು ತಂಬಿಗೆ ಬಿಸಿನೀರು ಕುಡಿದು, ಒಂದು ಗಂಟೆ ಕಠಿಣ ಯೋಗ, ಪ್ರಾಣಾಯಾಮ ಮುಗಿಸಿ, ತಣ್ಣೀರ ಸ್ನಾನಗೈದು, ಮಡಿ ಕಾವಿ ಧರಿಸಿ, ಇಷ್ಟಲಿಂಗವಿಡಿದು ಗಂಟೆಗೂ ಮಿಗಿಲು ಧ್ಯಾನ ಮುಗಿಸಿ, ಬೆಳಗಿನ ಮೊದಲ ಸೂರ್ಯ ಕಿರಣಗಳನ್ನ ಮೈಮೇಲೆ ಬೀಳಿಸಿಕೊಂಡು ಮಠಕ್ಕೆ ಹೊಂದಿಕೊಂಡಂತಿದ್ದ ತೆಂಗಿನ ತೋಟದ ಬದುವಿನ ಮೇಲೆ ಹೊಸ ಗಾಳಿ ಸೇವಿಸುತ್ತ ಅಲ್ಲಲ್ಲೆ ಬಳ್ಳಿಗಳಲ್ಲಿ ಹಬ್ಬಿದ್ದ ಅಮೃತ ಬಳ್ಳಿ ಎಲೆಯನ್ನು, ತುಳಿಸಿ ಪತ್ರೆಯನ್ನು ಮೆಲ್ಲುತ್ತ, ಈ ಮಧ್ಯೆ ಪಾದಕ್ಕೆರಗಿದವರಿಗೆ ಆಶೀರ್ವದಿಸುತ್ತ ಮೆಲ್ಲಗೆ ಮಠಕ್ಕೆ ಹಿಂದಿರುಗುತ್ತಿದ್ದರು.

ಆದರೆ, ಈದಿನ ಅದಾವುದನ್ನೂ ಮಾಡದೆ ತಡವಾಗಿ ಎದ್ದವರು ಸ್ನಾನವೊಂದನ್ನು ಗೈದು, ಮಡಿ ಕಾವಿ ಧರಿಸಿ, ವಿಭೂತಿ ಬಳಿದು ಪೀಠದ ಮೇಲೆ ಕುಳಿತಿದ್ದರು. ಹೆಬ್ಬಾಗಿಲಿನಿಂದ ಮೆಲ್ಲಗೆ ಪ್ರವೇಶಿಸುತ್ತಿದ್ದ ಸೂರ್ಯ ಕಿರಣಗಳನ್ನು ಗಮನಿಸುತ್ತ, ಅದನ್ನು ಕದಡಿ ಯಾರಾದರೂ ಒಳ ಬರುವುದನ್ನೆ ಕಾದಿದ್ದರು. ಅಂದುಕೊಂಡಂತೆಯೇ ಪೇಪರ್ ಹಾಕುವ ಹುಡುಗ ಬೆಳಕ ನುಸುಳಿ ಒಳಬಂದು ಸ್ವಾಮೀಜಿಯವರ ಮುಂದಿದ್ದ ಟಿಪಾಯ್ ಮೇಲೆ ಪೇಪರ್ ಇಟ್ಟು ಪಾದಕ್ಕೆರಗಿ ಬಂದಂತೆಯೇ ಹಿಂತಿರುಗಿದ. ಅದಕ್ಕಾಗೆ ಕಾದಿದ್ದ ಶ್ರೀಗಳು ಪತ್ರಿಕೆಯಲ್ಲಿನ ಪ್ರಮುಖ ಸುದ್ದಿಗಳನ್ನು ಗಮನಿಸದೆ, ತರಾತುರಿಯಲ್ಲಿ ಪೇಪರ್‌ನ ಆ ಮೂಲೆ ಈ ಮೂಲೆಯಲ್ಲಿ ಕಣ್ಣಾಡಿಸತೊಡಗಿದರು.

ಕೊನೆಗೂ ಅವರು ಹುಡುಕುತ್ತಿದ್ದುದು ಸಿಕ್ಕಿತು. ಎರಡನೇ ಪುಟದ ತಳಭಾಗದ ಕೊನೆಯಲ್ಲಿ 'ಶ್ರೀಮಠದ ಹೂದೋಟಕ್ಕೆ ಬೇಕಾಗಿದ್ದಾರೆ' ಎಂಬ ಶೀರ್ಷಿಕೆಯ ಜಾಹೀರಾತು ಕಂಡಿತು. ಅದರ ಒಳಬರಹ ಹೀಗಿತ್ತು. ಶ್ರೀಮಠದ ಶಾಖಾ ಗುರು ಪೀಠದಲ್ಲಿ ಮಠದ ಹೂದೋಟ ನೋಡಿಕೊಳ್ಳಲು ಬೇಕಾಗಿದ್ದಾರೆ, ಕಂಪ್ಯೂಟರ್‌ನಲ್ಲಿ ಕನ್ನಡ ಟೈಪಿಂಗ್ ಗೊತ್ತಿರುವ ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆ ಎಂದು ಸೇರಿಸಲಾಗಿತ್ತು.